**ಸಂಖ್ಯೆ: ಕಗೃಮ/ಉಪ್ರವ್ಯ (ಗ್ರಾಸೇ)/ಹಂಚಿಕೆ/ಮನೆಗಳು/ಸೂ.ನಗರ/2017-18**

ಗೃಹ ಆಯುಕ್ತರವರ ಕಛೇರಿ,
ಕರ್ನಾಟಕ ಗೃಹ ಮಂಡಳಿ,
ಕಾವೇರಿ ಭವನ, ಬೆಂಗಳೂರು.

## ಸಾರ್ವಜನಿಕ ಪ್ರಕಟಣೆ.

ಕರ್ನಾಟಕ ಗೃಹ ಮಂಡಳಿಯು ಬೆಂಗಳೂರು ನಗರದ ಸೂರ್ಯನಗರ-3ನೇ ಹಂತದಲ್ಲಿ ವಿವಿಧ ಮಾದರಿಯ ಮನೆಗಳನ್ನು ಅಭಿವೃದ್ಧಿಪಡಿಸಿ, ಸಾರ್ವಜನಿಕರಿಗೆ ಈಗಾಗಲೇ ಹಂಚಿಕೆ ಮಾಡಲಾಗಿದೆ. ಈ ಪೈಕಿ ಕೆಲವು ವಿವಿಧ ಮಾದರಿಯ ಮನೆಗಳು ಖಾಲಿ ಉಳಿದಿದ್ದು, ಖಾಲಿ ಉಳಿದಿರುವ ಮನೆಗಳನ್ನು ಪ್ರಸ್ತುತ ಹಂಚಿಕೆ ಮಾಡಲು ಉದ್ದೇಶಿಸಿ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ಸ್ಥಳ ಮತ್ತು ಜಿಲ್ಲೆ | ವರ್ಗ | ಕಟ್ಟಡದ ವಿಸ್ತೀರ್ಣ | ನೋಂದಣಿ ಶುಲ್ಕ | ಆರಂಭಿಕ ಠೇವಣಿ | ಮನೆಯ ಅಂತಿಮ ಬೆಲೆ | ಅರ್ಜಿಯನ್ನು ಪಡೆಯಲು ಮತ್ತು ಸಲ್ಲಿಸಬೇಕಾದ ಬ್ಯಾಂಕ್ ಹೆಸರು |
|---|---|---|---|---|---|---|---|
| 1 | 2 | 3 | 4 | 5 | 6 | 7 | |
| 1 | ಬೆಂಗಳೂರು ನಗರದ ಸೂರ್ಯನಗರ 3ನೇ ಹಂತ | LIG/N | 56.11 | 500/- | ರೂ. 15,00,000/- | ರೂ. 28,86,540/- | **Corporation Bank, SC Road Bangalore. A/c No. 014400201003000** |
| | | LIG/E-W | 54.68 | | | ರೂ. 28,77,410/- | |
| | | LIG/E | 55.57 | | | ರೂ. 29,72,370/- | |
| | | MIG/N-E | 69.18 | 1000/- | ರೂ 20,00,000/- | ರೂ. 36,40,740/- | |
| | | MIG/N | 69.68 | | | ರೂ. 36,95,370/- | |
| | | HIG-I/N-E | 169.15 | 1500/- | ರೂ 32,00,000/- | ರೂ. 61,74,510/- | |
| | | HIG-I/N | 194.50 | | | ರೂ. 63,92,440/- | |
| | | HIG-I/N-E | 105.85 | | | ರೂ. 54,67,190/- | |
| | | HIG-II/N-E | 182.16 | 1500/- | ರೂ. 44,00,000/- | ರೂ. 87,84,740/- | |
| **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 26-05-2017 ಲಾಟರಿ ದಿನಾಂಕ: 31-05-2017 ಸ್ಥಳ: ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿಯ (ಕಾವೇರಿ ಭವನ) ಆವರಣ ಬೆಳಗ್ಗೆ. 11.00 ಘಂಟೆಗೆ,** | | | | | | | |

### ಹಂಚಿಕೆಯ ನಿಯಮ, ಷರತ್ತು ಮತ್ತು ನಿಬಂಧನೆಗಳ ವಿವರಗಳು:-

1) ಅರ್ಜಿ ಸಲ್ಲಿಸುವವರು ಅರ್ಜಿಗಳನ್ನು ಮೇಲೆ ತಿಳಿಸಲಾಗಿರುವ ಬ್ಯಾಂಕ್‌ನಲ್ಲಿ ನಿಗಧಿತ ಅರ್ಜಿ ಶುಲ್ಕ ಪಾವತಿಸಿ ಅರ್ಜಿ ಪಡೆದು ಅದೇ ಬ್ಯಾಂಕ್‌ನಲ್ಲಿ ಆರಂಭಿಕ ಠೇವಣಿಯೊಂದಿಗೆ ಅರ್ಜಿ ಸಲ್ಲಿಸಬಹುದು. ನಿಗಧಿತ ಆರಂಭಿಕ ಠೇವಣಿ ಹಣಕ್ಕಿಂತ ಕಡಿಮೆ ಹಣ ಪಾವತಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಹಂಚಿಕೆಗೆ ಪರಿಗಣಿಸಲಾಗುವುದಿಲ್ಲ. 2) ಆರಂಭಿಕ ಠೇವಣಿಯನ್ನು **ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.** (Housing Commissioner, KHB, Bangalore) ಇವರ ಹೆಸರಿನಲ್ಲಿ ಚಲನ್/ಡಿ.ಡಿ. ಪಡೆದು ಭರ್ತಿ ಮಾಡಿದ ಅರ್ಜಿಯೊಂದಿಗೆ **Corporation Bank, SC Road Bangalore. A/c No. 014400201003000,** 3) ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವ ಅರ್ಜಿದಾರರು ಸಹ ಮಂಡಳಿಯ ನಿಯಮಾನುಸಾರ ಸಾರ್ವಜನಿಕ ಪ್ರಕಟಣೆ ಅನ್ವಯ ನಿಗದಿತ ಅರ್ಜಿ ನಮೂನೆಯೊಂದಿಗೆ ಹಾಗೂ ವ್ಯತ್ಯಾಸದ ಆರಂಭಿಕ ಠೇವಣಿ ಹಣವನ್ನು ಮಂಡಳಿಗೆ ಪಾವತಿಸಿ, ಅರ್ಜಿಯನ್ನು ನಿಗದಿಪಡಿಸಿದ ಬ್ಯಾಂಕ್‌ಗೆ ಸಲ್ಲಿಸಿದಲ್ಲಿ ಅರ್ಜಿಗಳನ್ನು ಮಂಡಳಿಯ ನಿಯಮ 1983 ರಂತೆ ಲಾಟರಿ ಮುಖಾಂತರ ಹಂಚಿಕೆ ಮಾಡಲು ಕ್ರಮ ವಹಿಸಲಾಗುವುದು. 4) ಸದರಿ ಬಡಾವಣೆಯಲ್ಲಿ ಈಗಾಗಲೇ ಮನೆ/ನಿವೇಶನಗಳನ್ನು ಲಾಟರಿ ಮೂಲಕ ಹಂಚಿಕೆ ಮಾಡಿದ್ದು, ಪ್ರಸ್ತುತ ಉಳಿದಿರುವ ಮನೆಗಳನ್ನು ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸುತ್ತಿರುವುದರಿಂದ, ಹಂಚಿಕೆಯನ್ನು ಯಾವುದೇ ಪ್ರವರ್ಗಗಳಲ್ಲಿ ಮೀಸಲಾತಿಯನ್ವಯ ಮನೆಗಳನ್ನು ಕಾಯ್ದಿರಿಸಿರುವುದಿಲ್ಲ. 5) ಮನೆಗಳನ್ನು ಹೇಗಿದೆಯೋ ಹಾಗೆ (AS IS WHERE IS BASIS) ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು. 6) ಮನೆ ಹಂಚಿಕೆಗಾಗಿ ಈಗಾಗಲೇ ಮನವಿ ಸಲ್ಲಿಸಿರುವ ಅರ್ಜಿದಾರರುಗಳು ಸಹ ಪ್ರಸ್ತುತ ಈ ಪ್ರಕಟಣೆಯನ್ವಯ ನಿಗಧಿತ ನಮೂನೆಯ ಅರ್ಜಿಯೊಂದಿಗೆ, ಆರಂಭಿಕ ಠೇವಣಿ ಪಾವತಿ ಮಾಡಿದಲ್ಲಿ ಮಾತ್ರ ನಿಯಮಾನುಸಾರ ಹಂಚಿಕೆಗೆ ಪರಿಗಣಿಸಲಾಗುವುದು. 7) ಮನೆಗಳು ಹಂಚಿಕೆಯಾಗದೆ ಇರುವ ಅರ್ಜಿದಾರರಿಗೆ ಅರ್ಜಿಯ ಜೊತೆ ಪಾವತಿಸಿರುವ ಮುಂಗಡ ಹಣವನ್ನು ಪೂರ್ಣ ಮರುಪಾವತಿ ಮಾಡಲಾಗುವುದು. ಹಂಚಿಕೆ ನಂತರ ರದ್ದತಿಯಾದಲ್ಲಿ ಆರಂಭಿಕ ಠೇವಣಿಯಲ್ಲಿ ಶೇಕಡ 10 ರಷ್ಟು ಮುರಿದುಕೊಂಡು ಮರುಪಾವತಿ ಮಾಡಲಾಗುವುದು. 8) ಕರ್ನಾಟಕ ಗೃಹ ಮಂಡಳಿ 1983ರ ಹಂಚಿಕೆ ನಿಯಮಾವಳಿ ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. 9) ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡವರನ್ನು ಸಂಪರ್ಕಿಸಬಹುದು. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮೊ. ನಂ. 9448373762, ಅಥವಾ ಉಪ ಪ್ರಧಾನ ವ್ಯವಸ್ಥಾಪಕರು ಮತ್ತು ಕಂದಾಯ ಅಧಿಕಾರಿ-1, ಕಂದಾಯ ಅಧಿಕಾರಿ-2, ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080-22273511 ext. 335/307/309 ಸಂಪರ್ಕಿಸಬಹುದು.

ಸಹಿ/-
ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು.

**ದಿನಾಂಕ: 10-05-2017.**